## ನಿಮ್ಮೊಡನೆ

# ಮೂಗಿಗೆ ತುಪ್ಪವಾಗದಿರಲಿ

ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿದ ಎರಡು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಅಭಿವೃದ್ಧಿಯತ್ತ ದೃಢ ಹೆಜ್ಜೆ ಇಟ್ಟಿದೆ ಎಂಬುದರ ಸೂಚನೆಯಾಗಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆದಿದೆ. ಹೂಡಿಕೆಯ ಭರವಸೆಗಳೇನೋ ಯಾವುದೇ ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನೂ ಮೀರಿಸುವಂತೆ ಹೊರಬಿದ್ದಿವೆ. ಒಪ್ಪಂದಗಳಿಗೆ ಸಹಿಯೂ ಬಿದ್ದಿದೆ. ನಾಲ್ಕು ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಭರವಸೆ. ಲಕ್ಷಾಂತರ ಜನರಿಗೆ ಉದ್ಯೋಗದ ಆಮಿಷ. ಈ ಸಮಾವೇಶದಲ್ಲಿ ಸಹಿಯಾದ ಹೂಡಿಕೆ ಒಪ್ಪಂದಗಳು ನಿರ್ದಿಷ್ಟ ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ಬಂದರೆ ಕರ್ನಾಟಕ ವಿಶ್ವದಲ್ಲಿಯೇ ಮುಂಚೂಣಿಯ ರಾಜ್ಯವಾಗುವುದರಲ್ಲಿ ಸಂದೇಹವೇ ಇಲ್ಲ ಎಂಬ ಭಾವ ಮೂಡುತ್ತದೆ.

ಕಲ್ಪನೆಗಿಂತ ವಾಸ್ತವತೆ ಕಠೋರ. ಹತ್ತು ವರ್ಷಗಳಿಂದ ಈಚೆಗೆ ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸುವ ಪ್ರಯತ್ನಗಳು ದೊಡ್ಡ ಪ್ರಮಾಣದಲ್ಲಿ ನಡೆದಿರುವುದನ್ನು ರಾಜ್ಯದ ಜನತೆ ಈ ಮೊದಲು ಕೂಡ ಕಂಡಿದ್ದಾರೆ. ಕಾಂಗ್ರೆಸ್ ಪಕ್ಷದ ಆಡಳಿತ ಇದ್ದ ಕೆಲವೇ ವರ್ಷಗಳ ಹಿಂದೆ ಅಂದಿನ ಕೈಗಾರಿಕಾ ಸಚಿವರ ಉಸ್ತುವಾರಿಯಲ್ಲಿಯೂ ಒಂದು ಸಮಾವೇಶ ನಡೆದಿತ್ತು. ಬಂಡವಾಳ ಆಕರ್ಷಿಸುವ ನೆಪದಲ್ಲಿ ವಿದೇಶಗಳಿಗೆ ಪರಿವಾರ ಸಹಿತ ಭೇಟಿ ಕೊಡುವ ಪರಿಪಾಠ ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ಕಳೆದ ತೊಂಬತ್ತರ ದಶಕದಿಂದಲೇ ಆರಂಭವಾದ ಅಭ್ಯಾಸ. ಅದೊಂದು ಪಿಡುಗಿನಂತೆ ಬೆಳೆದಿತ್ತು. ಮುಖ್ಯಮಂತ್ರಿಗಳು, ಇತರ ಸಚಿವರು ತಮ್ಮ ಕುಟುಂಬಸ್ಥರೊಂದಿಗೆ ವಿದೇಶಗಳಿಗೆ ಮೋಜಿನ ಯಾತ್ರೆ ಮಾಡುವಾಗ ಸಾರ್ವಜನಿಕವಾಗಿ ನೀಡುತ್ತಿದ್ದ ಕಾರಣ ವಿದೇಶಗಳಿಂದ ಬಂಡವಾಳ ಆಕರ್ಷಿಸುವುದು ಎಂಬುದೇ ಆಗಿತ್ತು. ಬಂಡವಾಳ ಹೂಡಬಲ್ಲ ಉದ್ಯಮಿಗಳಿರುವ ಶ್ರೀಮಂತ ದೇಶಗಳಿಗೆ ಹೋದಾಗ ಮಾತ್ರವಲ್ಲದೆ, ಪ್ರವಾಸೋದ್ಯಮ ವಿನಾ ಬೇರೇನೂ ಇಲ್ಲದ ಮಲೇಷ್ಯಾ, ಸಿಂಗಪುರದಂತಹ ಕಡೆ ಹೋದಾಗಲೂ ಬಂಡವಾಳ ತರುವ ಮಾತನ್ನೇ ಹೇಳುತ್ತಿದ್ದರು. ಈ ಹಿಂದಿನ ಪ್ರವಾಸಗಳೆಲ್ಲ ಮೋಜಿನ ಪ್ರವಾಸಗಳೇ ಆದವು ಎಂಬುದಕ್ಕೆ ಯಾವ ದೇಶಗಳಿಂದಲೂ ನಯಾಪೈಸೆಯಷ್ಟು ಬಂಡವಾಳ ಹರಿದು ಬರದಿರುವುದೇ ಸಾಕ್ಷಿಯಾಗಿತ್ತು.

ಈ ಸಲ ಹಾಗೆ ಆಗದಿರಲಿ. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೋಟ್ಯಂತರ ರೂಪಾಯಿ ಬಂಡವಾಳ ತೊಡಗಿಸಲು ಉದ್ಯಮಿಗಳು ಬಂದಿರುವುದು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವವರಿಗೆ ಹೆಚ್ಚಿನ ವಿಶ್ವಾಸ ಮೂಡಿಸಿದೆ. ಬಂಡವಾಳದ ಆಸೆಗೆ ಆಹ್ವಾನಿಸುವ ಉದ್ಯಮಿಗಳು ಗುಡಾರದಲ್ಲಿ ತಲೆ ಹಾಕಿದ ಒಂಟೆಯಂತೆ ರಕ್ಷಣಾ ಮುಸುಕನ್ನು ಕಿತ್ತೆಸೆಯುವಂಥ ಸಂದರ್ಭಕ್ಕೆ ಆಸ್ಪದ ನೀಡಬಾರದು. ಇಲ್ಲಿ ಆಗುತ್ತಿರುವ ಅಭಿವೃದ್ಧಿಯ ಪ್ರಯೋಜನ ರಾಜ್ಯದ ಜನತೆಯ ಜೀವನಮಟ್ಟ ಸುಧಾರಣೆಗೆ ಬಳಕೆಯಾಗುವಂತಿರಬೇಕು. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಉದ್ಯಮಗಳೇನೂ ಇಲ್ಲಿ ಬರುತ್ತಿಲ್ಲವಾದರೂ ಇವರ ಆಗಮನದಿಂದ ಕೃಷಿ ಕ್ಷೇತ್ರದಲ್ಲಿ ತಲ್ಲಣ ಆಗಬಾರದು. ಉದ್ಯಮಗಳನ್ನು ಆರಂಭಿಸಲು ಅಗತ್ಯವಾಗಿ ಭೂಮಿ ಬೇಕು. ರಾಜ್ಯದಲ್ಲಿ ಇಂಥ ಭೂಮಿಯನ್ನು ಸರ್ಕಾರ ಗುರುತಿಸಿದೆಯಾದರೂ ಕೃಷಿಯೋಗ್ಯವಾದ ಭೂಮಿಯೂ ಉದ್ದೇಶಿತ ಕೈಗಾರಿಕೆಗಳಿಗೆ ವಶವಾಗಲೇಬೇಕಿದೆ. ಕೃಷಿ ಈಗ ಲಾಭದಾಯಕವಲ್ಲ ಎಂಬುದು ಕೃಷಿ ಭೂಮಿಯ ಸ್ವಾಧೀನಕ್ಕೆ ಕಾರಣವಾಗಬಾರದು. ಸ್ವಂತ ಭೂಮಿಯನ್ನು ತ್ಯಜಿಸಿ ರೈತರು ಬೀದಿಗೆ ಬೀಳುವಂಥ ಸ್ಥಿತಿಯನ್ನು ಯಾವ ಸರ್ಕಾರವೂ ಸೃಷ್ಟಿಸಬಾರದು. ಆದರೆ, ಮಾರುಕಟ್ಟೆ ದರದಲ್ಲಿ ಬೆಲೆ ಕೊಟ್ಟು ಸಮರ್ಪಕ ಪುನರ್‌ವಸತಿಗೆ ಕಾಲಮಿತಿಯಲ್ಲಿ ನೆರವಾದರೆ ಯಾವ ರೈತರೂ ಭೂ ಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಲಾರರು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಕೈಗಾರಿಕೀಕರಣ ಇಲ್ಲವೇ ವಿನಾಶ ಎಂಬ ವಿಶ್ವೇಶ್ವರಯ್ಯ ಅವರ ಮಾತು ಇಂದಿಗೂ ಪ್ರಸ್ತುತವಾದದ್ದೆ. ಆದರೆ, ಅದು ಜನಜೀವನವನ್ನು ಅಸ್ತವ್ಯಸ್ತಗೊಳಿಸಿ ತಲೆ ಎತ್ತತಕ್ಕದ್ದಲ್ಲ. ಕೈಗಾರಿಕೆಗಳನ್ನು ನೆಲೆಗೊಳಿಸುವ ಉತ್ಸಾಹದಲ್ಲಿ ರಾಜ್ಯದ ಸಂಪನ್ಮೂಲವನ್ನು ಸೂರೆಹೊಡೆಯುವ ಉದ್ದೇಶವೇ ಮೇಲುನೋಟಕ್ಕೆ ತೋರುವಂತಿರಬಾರದು. ಅಭಿವೃದ್ಧಿಯ ಲಾಭ ಬೇಕೆಂದರೆ ಕೆಲವನ್ನಾದರೂ ತ್ಯಾಗ ಮಾಡಬೇಕು ಎಂಬುದು ನಿಜ. ಆದರೆ, ರಾಜ್ಯದ ಜನತೆಗೆ ಯಾವ ದೃಷ್ಟಿಯಿಂದಲೂ ತೊಂದರೆ ಆಗದಂತೆ ಅಭಿವೃದ್ಧಿ ಸಾಧಿಸುವುದು ಸರ್ಕಾರದ ಮುಂದೆ ಇರುವ ಸವಾಲು. ಲಕ್ಷ ಲಕ್ಷ ಕೋಟಿಗಳ ಬಂಡವಾಳದ ಆಸೆ ಕನ್ನಡಿಯ ಗಂಟಿನಂತೆ ಒಪ್ಪಂದ ಪತ್ರಗಳಲ್ಲಿಯೇ ಉಳಿದರೆ ಪ್ರಯೋಜನವಿಲ್ಲ. ಲಕ್ಷಗಟ್ಟಲೆ ಉದ್ಯೋಗ ಸೃಷ್ಟಿಯ ಮಾತು ನಿರುದ್ಯೋಗಿಗಳ ಮೂಗಿಗೆ ತುಪ್ಪ ಸವರಿದಂತೆ ಆಗಬಾರದು. ಒಪ್ಪಂದಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯನ್ನು ಪ್ರದರ್ಶಿಸದಿದ್ದರೆ ಸಮಾವೇಶ ನಡೆಸಿದ್ದೇ ಸಾಧನೆ ಆಗುತ್ತದೆ.

■ ಲಕ್ಷ್ಮಣ ಕೊಡಸೆ

**ರಾಜ್ಯದ ಜನತೆಗೆ ಯಾವ ದೃಷ್ಟಿಯಿಂದಲೂ ತೊಂದರೆ ಆಗದಂತೆ ಅಭಿವೃದ್ಧಿ ಸಾಧಿಸುವುದು ಸರ್ಕಾರದ ಮುಂದೆ ಇರುವ ಸವಾಲು. ಲಕ್ಷ ಲಕ್ಷ ಕೋಟಿಗಳ ಬಂಡವಾಳದ ಆಸೆ ಕನ್ನಡಿಯ ಗಂಟಿನಂತೆ ಒಪ್ಪಂದ ಪತ್ರಗಳಲ್ಲಿಯೇ ಉಳಿದರೆ ಪ್ರಯೋಜನವಿಲ್ಲ. ಲಕ್ಷಗಟ್ಟಲೆ ಉದ್ಯೋಗ ಸೃಷ್ಟಿಯ ಮಾತು ನಿರುದ್ಯೋಗಿಗಳ ಮೂಗಿಗೆ ತುಪ್ಪ ಸವರಿದಂತೆ ಆಗಬಾರದು. ಒಪ್ಪಂದಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯನ್ನು ಪ್ರದರ್ಶಿಸದಿದ್ದರೆ ಸಮಾವೇಶ ನಡೆಸಿದ್ದೇ ಸಾಧನೆ ಆಗುತ್ತದೆ.**



ವಿಷ್ಣು